# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 29.03.2011**

## ***ಪಾಲಿಕೆಯ ಕಾ.ಪಾ.ಅ-ಸಿ.ವಿ. ರಾಮನ್‌ನಗರ ವಿಭಾಗ ಕಛೇರಿ ಸ್ಥಳಾಂತರ***

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾರ್ಯಪಾಲಕ ಅಭಿಯಂತರರು (ಸಿ.ವಿ. ರಾಮನ್‌ನಗರ) ವಿಭಾಗ ಕಛೇರಿಯು ಮೇಯೋಹಾಲ್ ಕಟ್ಟಡದ ಮೊದಲ ಅಂತಸ್ತಿನಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಕಟ್ಟಡವನ್ನು ನ್ಯಾಯಾಂಗ ಇಲಾಖೆಗೆ ಹಸ್ತಾಂತರಿಸಲು ಆದೇಶಿಸಿರುವ ಹಿನ್ನೆಲೆಯಲ್ಲಿ ಈಗ ಈ ಕಛೇರಿಯನ್ನು ವಾರ್ಡ್ ನಂ.50ರಲ್ಲಿನ ಕಸ್ತೂರಿನಗರದ 1ನೇ ಅಡ್ಡರಸ್ತೆ, 2ನೇ 'ಹೆಚ್' ಮುಖ್ಯರಸ್ತೆಯಲ್ಲಿನ ಸಹಾಯಕ ಕಾರ್ಯಪಾಲಕ ಅಭಿಯಂತರರು (ಸಿ.ವಿ. ರಾಮನ್‌ನಗರ) ಉಪ ವಿಭಾಗ ರವರ ಕಛೇರಿಯ ಮೊದಲ ಅಂತಸ್ತಿನಲ್ಲಿರುವ ಮಹಾನಗರ ಪಾಲಿಕೆಯ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ. ಸದರಿ ಕಛೇರಿಯು ದಿನಾಂಕ: 28.03.2011 ರಿಂದ ಕಾರ್ಯನಿರ್ವಹಿಸುತ್ತಿದೆ ಎಂದು ಕಾರ್ಯಪಾಲಕ ಅಭಿಯಂತರರು (ಸಿ.ವಿ. ರಾಮನ್‌ನಗರ) ವಿಭಾಗ ರವರು ತಿಳಿಸಿರುತ್ತಾರೆ. ಸಂಬಂಧಪಟ್ಟ ಸಾರ್ವಜನಿಕರು ಇನ್ನು ಮುಂದೆ ಸ್ಥಳಾಂತರಗೊಂಡಿರುವ ಕಛೇರಿಯನ್ನು ತಮ್ಮ ಕೆಲಸ ಕಾರ್ಯಗಳಿಗೆ ಸಂಪರ್ಕಿಸಲು ಕೋರಿದೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**